www.ecourtsindia.com

# ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ, ಹೊಸಕೋಟೆ.

ಓ.ಎಸ್ ಸಂಖ್ಯೆ.**427/2022** ಪಿ.ಡಬ್ಲೂ .1

ದಿನಾಂಕಃ 09-04-2025 ರಂದು ಸಾಕ್ಷಿಗೆ ಪ್ರಮಾಣ ವಚನ ಭೋಧಿಸಲಾಯಿತು.

ಪಾಟೀ ಸವಾಲುಃ- **3** ನೇ ಪ್ರತಿವಾದಿ ಪರ ವಕೀಲರಿಂದಃ-

ಈ ದಾವೆಯನ್ನು ಯಾರ ವಿರುದ್ಧ, ಯಾವ ಕಾರಣಕ್ಕಾಗಿ ಸಲ್ಲಿಸಿರುತ್ತೇನೆಂದು ಗೊತ್ತು. ಈ ದಾವೆಯನ್ನು 2-22 ವರೆ ಗುಂಟೆ ಜಮೀನಿನ ಮೇಲೆ ಸಲ್ಲಿಸಿದ್ದೇನೆ. ಅದರ ಚೆಕ್ಕುಬಂದ ಪೂರ್ವಕ್ಕೆ- ವಾದಿಗೆ ಸೇರಿದ ಜಮೀನು, ಪಶ್ಚಿಮಕ್ಕೆ - ಕರಾಬು ದೊಂಗರ ಮತ್ತು ಎಸ್ ನಾಗರಾಜು ರವರ ಜಮೀನು, ಉತ್ತರಕ್ಕೆ- ಅಂಗಡಿ ರಾಮಣ್ಣನವರ ಜಮೀನು, ದಕ್ಷಿಣಕ್ಕೆ- ಹೊಟ್ಟೆಪ್ಪನ ಜಮೀನು ಇದೆ. ಸರ್ವೆ ನಂ. 35/3 ರ ಜಮೀನು ಯಾರ ಹೆಸರಿನಲ್ಲಿ ದಾಖಲಾಗಿದೆ, ಅದರ ದಾಖಲೆ ಹಾಜರು ಮಾಡಿದ್ದೇನೆ. ನಾನು ದಾವೆ ಸಲ್ಲಿಸುವ ಕಾಲಕ್ಕೆ ಅದು ಪೋಡಿಯಾಗಿರುವುದಿಲ್ಲ, ಈಗ ಪೋಡಿಯಾಗಿರುತ್ತದೆ. ಮೂಲತಃ ದಾವಾ ಆಸ್ತಿ ಸಿ. ಅಬ್ದುಲ್ ಅಜೀಜ್ ರವರಿಗೆ ಸೇರಿದ್ದು, ಅವರು ಜೈನಾಬೀ ರವರಿಂದ 1949 ರಲ್ಲಿ 10-20 ಗುಂಟೆ ಜಮೀನನ್ನು ಖರೀದಿಸಿರುತ್ತಾರೆ. ಜೈನಾಬೀ ರವರಿಗೆ ಸದರಿ ಜಮೀನು ಸೇರಿರುತ್ತದೆ ಎಂಬುದರ ಬಗ್ಗೆ ದಾಖಲೆ ಹಾಜರು ಮಾಡಿದ್ದೇನೆ. ಅದೇ ರೀತಿ ಸಿ. ಅಬ್ದುಲ್ ಅಜೀಜ್ ರವರಿಗೆ 1949-50 ರ ನಂತರ ಖಾತೆ ಪಹಣಿಯಾದ ಬಗ್ಗೆ ದಾಖಲೆ ಹಾಜರು ಮಾಡಿರುತ್ತೀರಾ ಎಂದರೆ ಇಲ್ಲ. ಅವರ ಹೆಸರಿನಲ್ಲಿ 8 ಎಕರೆ ಜಮೀನು ಇದ್ದ ಬಗ್ಗೆ ದಾಖಲೆ ಹಾಜರು ಮಾಡಿದ್ದೇನೆ.

1949 ಕ್ಕೂ ಮೊದಲೇ ಸರ್ವೆ ನಂ. 35 ರಲ್ಲಿ 5-5 ಗುಂಟೆ ಜಮೀನು 1 ನೇ ಪ್ರತಿವಾದಿಯ ಹೆಸರಿಗೆ ಕ್ರಯ ಆಗಿತ್ತು ಎಂದರೆ ಸುಳ್ಳು. 1 ನೇ ಪ್ರತಿವಾದಿ ಸದರಿ ಆಸ್ತಿಯ ಬಗ್ಗೆ 2 ನೇ ಪ್ರತಿವಾದಿ ವಿರುದ್ಧ ದಾವೆ ಸಲ್ಲಿಸಿದ್ದರು ಎಂದರೆ ಸರಿ. ಸದರಿ ದಾವೆ ರಾಜೀಯಾಗಿದ್ದು, ರಾಜೀಯಲ್ಲಿ ತಲಾ 2-22 ವರೆ ಗುಂಟೆ ಜಮೀನು 1 ಮತ್ತು 2 ನೇ ಪ್ರತಿವಾದಿಗಳಿಗೆ ಬಂದಿರುತ್ತದೆ. 1 ನೇ ಪ್ರತಿವಾದಿ ತನಗೆ ಬಂದ ಭಾಗವನ್ನು ಚೆನ್ನವೀರದೇವರು ರವರಿಗೆ ಮಾರಾಟ ಮಾಡಿರುತ್ತಾರೆ ಎಂದರೆ ಸರಿ. ಸದರಿ

This is a True Copy of the Court Records Online. Authenticated @ districts.ecourtsindia.com/cnr/KABR510017902022/truecopy/order-7.pdf

ಜಮೀನಿನಲ್ಲಿ ಹುಣಸೆ ತೋಪು ಇದೆ ಎಂದರೆ ಸರಿ. 1953 ರಲ್ಲಿ ದಾವೆ ಸಲ್ಲಿಸಿದ ಸಮಯದಲ್ಲಿ 10-20 ಗುಂಟೆ ಜಮೀನಿನ ಖಾತೆ 1 ಪ್ರತಿವಾದಿಯ ಹೆಸರಿನಲ್ಲಿ ಇರಲಿಲ್ಲ ಎಂದರೆ ಸಾಕ್ಷಿ ಖಾತೆ ಬದಲಾವಣೆ ಮಾಡುವ ಸಮಯದಲ್ಲಿ ತಕರಾರು ಮಾಡಿದ್ದರು ಎಂದು ನುಡಿಯುತ್ತಾರೆ. 1 ನೇ ಪ್ರತಿವಾದಿಯಿಂದ ವಾದಿ 8 ಎಕರೆ ಜಮೀನನ್ನು ದಿನಾಂಕಃ 27-04-1992 ರಲ್ಲಿ ಖರೀದಿಸಿರುತ್ತಾರೆ. ಸದರಿ ಕ್ರಯದ ಸಮಯದಲ್ಲಿ 1 ನೇ ಪ್ರತಿವಾದಿಗೆ 8 ಎಕರೆ ಜಮೀನು ಇರಲಿಲ್ಲ, ಕೇವಲ 5-05 ಗುಂಟೆ ಜಮೀನು ಮಾತ್ರ ಇತ್ತು ಎಂದರೆ ಸುಳ್ಳು. 2 ನೇ ಪ್ರತಿವಾದಿಯ ಹೆಸರಿನಲ್ಲಿ ಯಾವುದೇ ಉಳಿಕೆ ಜಮೀನು ಇಲ್ಲ. ಎಲ್ಲಾ ಮಾರಾಟ ಮಾಡಿರುತ್ತಾರೆ. ನಿಪಿ. 18 ರಂತೆ 2 ನೇ ಪ್ರತಿವಾದಿಯ ಹೆಸರಿನಲ್ಲಿ 33 ಗುಂಟೆ ಖಾತೆ ಇದೆ ಎಂದರೆ ಸಾಕ್ಷಿ ರೆವೆನ್ಯೂ ಅಧಿಕಾರಿಗಳು ತಪ್ಪಾಗಿ ಮಾಡಿದ್ದು, ತಿದ್ದುಪಡಿ ಮಾಡಿಸಿದ್ದೇನೆ. ಅದೇ ರೀತಿ ಅಲ್ಲಾ ಬಕಾಷ್ ಹೆಸರಿನಲ್ಲಿ 4-23 ಗುಂಟೆ ಖಾತೆ ಇದೆ ಎಂದರೆ ಹೌದು. 1 ನೇ ಪ್ರತಿವಾದಿ ಮಾರಾಟ ಮಾಡಿರುವ 3 ನೇ ಪ್ರತಿವಾದಿಯ ಜಮೀನು ದಾವಾ ಆಸ್ತಿಯ ಪಶ್ಚಿಮಕ್ಕೆ ಇದೆ. ಸದರಿ ಮಾರಾಟದ ಜಮೀನಿಗೂ ನಮಗೂ ಯಾವುದೇ ಸಂಬಂಧ ಇಲ್ಲ ಎಂದಿರೆ ಸರಿ. ನಾನು ಚೆಕ್ಕುಬಂದಿಯಲ್ಲಿ ಹೇಳಿರುವಂತೆ ಪೂರ್ವಕ್ಕೆ - ಅಲ್ಲಾ ಬಕಾಷ್ ರವರ ಜಮೀನು ಇದೆ ಎಂದರೆ ಹೌದು. ದಾವೆಯಲ್ಲಿ ನಮೂದಿಸಿರುವ ಚೆಕ್ಕುಬಂದಿ ಸರಿ ಇದೆಯೇ ಎಂದರೆ ಹೌದು. ನನಗೆ ಈ ದಾವೆಯ ಮೂಲಕ 3-17 ಗುಂಟೆ ಜಮೀನು ನಮ್ಮ ಹೆಸರಿಗೆ ಬರಬೇಕು ಎಂದು ಕೇಳಿಕೊಂಡಿರುತ್ತೇನೆ. ಸದರಿ ಜಮೀನಿನಲ್ಲಿ ನಾನೇ ಸ್ವಾಧೀನದಲ್ಲಿ ಇರುತ್ತೇನೆ ಎಂಬುದರ ಬಗ್ಗೆ ದಾಖಲೆ ಹಾಜರು ಮಾಡಿರುತ್ತೇನೆ. ಆ ಬಗ್ಗೆ ರೆವೆನ್ಯೂ ಅಧಿಕಾರಿಗಳು ದಾಖಲೆಗಳನ್ನು ಸೃಷ್ಟಿ ಮಾಡಿಕೊಂಡಿರುತ್ತಾರೆ. ವಾದಿಯ ಹೆಸರಿನಲ್ಲಿ ದಾವಾ ಆಸ್ತಿ ಇರುವ ಬಗ್ಗೆ ದಾಖಲೆ ಹಾಜರು ಮಾಡಿದ್ದೇನೆ.

3 ನೇ ಪ್ರತಿವಾದಿ ಚೆನ್ನವೀರದೇವರು ರವರ ತಮ್ಮ ಎಂದರೆ ಹೌದು. ಸದರಿ ಚೆನ್ನವೀರದೇವರು ರವರಿಗೆ ಆಗಿರುವ ಕ್ರಯವನ್ನು ನಾನು ಪ್ರಶ್ನೇ ಮಾಡಿಲ್ಲ. 1 ನೇ ಪ್ರತಿವಾದಿ 2-22 ವರೆ ಗುಂಟೆ ಜಮೀನನ್ನು 4 ನೇ ಪ್ರತಿವಾದಿಗೆ ಮಾರಾಟ ಮಾಡಿರುತ್ತಾರೆ ಎಂದರೆ ಸಾಕ್ಷಿ ದಾಖಲೆಗಳನ್ನು ಸೃಷ್ಟಿ

This is a True Copy of the Court Records Online. Authenticated @ districts.ecourtsindia.com/cnr/KABR510017902022/truecopy/order-7.pdf

www.ecourtsindia.com

ಮಾಡಿಕೊಂಡಿರುತ್ತಾರೆ ಎಂದು ನುಡಿಯುತ್ತಾರೆ. ಅವರ ಹೆಸರಿನಲ್ಲಿ ಈಗಲೂ ಖಾತೆ ಪಹಣಿ ಇದೆ ಎಂದರೆ ಅವರು ದಾಖಲೆಗಳನ್ನು ಸೃಷ್ಟಿ ಮಾಡಿಕೊಂಡಿರುತ್ತಾರೆ ಎಂದು ನುಡಿಯುತ್ತಾರೆ. ಸದರಿ ಕ್ರಯವನ್ನು ನಾನು ಪ್ರಶ್ನೇ ಮಾಡಿಲ್ಲ. ಈ ದಾವೆ ಸಲ್ಲಿಸಿದ್ದೇನೆ. ನಾನು ಪ್ರತಿವಾದಿಗಳಿಗೆ ತೊಂದರೆ ನೀಡುವ ಉದ್ದೇಶದಿಂದ, ಸುಳ್ಳು ದಾವೆ ಸಲ್ಲಿಸಿ, ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. 1 ಮತ್ತು 3 ನೇ ಪ್ರತಿವಾದಿಗಳು 1992 ರಲ್ಲಿ ನಮ್ಮ ಸ್ವಾಧೀನಕ್ಕೆ ಮತ್ತು ಖಾತೆ ಪಹಣಿ ಮಾಡಲು ತೊಂದರೆ ನೀಡಿದ ಕಾರಣ ಈ ದಾವೆ ಸಲ್ಲಿಸಿದ್ದೇನೆ. 1 ಮತ್ತು 3 ನೇ ಪ್ರತಿವಾದಿಗಳು ನಮ್ಮ ಸ್ವಾಧೀನಕ್ಕೆ ಯಾವತ್ತೂ ತೊಂದರೆ ನೀಡಿಲ್ಲದೆ ಇದ್ದರು ಅವರ ವಿರುದ್ಧ ಸುಳ್ಳು ದಾವೆ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ಆ ಬಗ್ಗೆ ಪೊಲೀಸರಿಗೆ ದೂರು ನೀಡಿಲ್ಲ. ನಮಗೂ ಈ ದಾವಾ ಆಸ್ತಿಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸುಳ್ಳು.

ಉಳಿದ ಪ್ರತಿವಾದಿಗಳು ಗೈರು ಹಾಜರು, ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

ಮರು ವಿಚಾರಣೆ ಇಲ್ಲ.

**(ಮುಕ್ತ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಗಣಕೀಕರಿಸಲಾಯಿತು.)**

ಓ.ಹೇ.ಕೇ.ಸ.ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು,
ಹೊಸಕೋಟೆ.

This is a True Copy of the Court Records Online. Authenticated @ districts.ecourtsindia.com/cnr/KABR510017902022/truecopy/order-7.pdf

www.ecourtsindia.com